ಪತ್ರಿಕಾ ಪ್ರಕಟಣೆ
ಸೆಪ್ಟ್ಂಬರ್ 30,2006

**ಅಕ್ಟೋಬರ್ 3,2006ರಿಂದ ಯುನೈಟೆಡ್ ವೆಸ್ಟ್ರನ್ ಬ್ಯಾಂಕಿನ ಶಾಖೆಗಳು ಭಾರತೀಯ ಕೈಗಾರಿಕಾ ಅಭಿವೃದ್ಧಿ ಬ್ಯಾಂಕಿನ ಶಾಖೆಗಳಾಗಿ ಕಾರ್ಯನಿರ್ವಹಿಸುತ್ತವೆ.**

ಯುನೈಟೆಡ್ ವೆಸ್ಟ್ರನ್ ಬ್ಯಾಂಕು ಭಾರತೀಯ ಕೈಗಾರಿಕ ಅಭಿವೃದ್ಧಿ ಬ್ಯಾಂಕಿನೊಂದಿಗೆ ವಿಲೀನಗೊಳ್ಳುವ ಯೋಜನೆಗೆ ಭಾರತ ಸರ್ಕಾರ ಇಂದು ಮಂಜೂರಾತಿ ನೀಡಿದೆ. ಈ ವಿಲೀನ ಯೋಜನೆ ಅಕ್ಟೋಬರ್ 3,2006ರಿಂದ ಜಾರಿಗೆ ಬರಲಿದೆ. ಈ ದಿನದಿಂದ ಯುನೈಟೆಡ್ ವೆಸ್ಟ್ರನ್ ಬ್ಯಾಂಕಿನ ಎಲ್ಲಾ ಶಾಖೆಗಳು ಭಾರತೀಯ ಕೈಗಾರಿಕ ಅಭಿವೃದ್ಧಿ ಬ್ಯಾಂಕಿನ ಶಾಖೆಗಳಾಗಿ ಕಾರ್ಯನಿರ್ವಹಿಸುತ್ತವೆ.

ಅಕ್ಟೋಬರ್ 3,2006ರಿಂದ ಯುನೈಟೆಡ್ ವೆಸ್ಟ್ರನ್ ಬ್ಯಾಂಕಿನ ಠೇವಣಿದಾರರನ್ನೊಳಗೊಂಡಂತೆ, ಗ್ರಾಹಕರು, ಭಾರತೀಯ ಕೈಗಾರಿಕ ಅಭಿವೃದ್ಧಿ ಬ್ಯಾಂಕಿನ ಗ್ರಾಹಕರಾಗಿ ತಮ್ಮ ಖಾತೆಗಳನ್ನು ನಿರ್ವಹಿಸಬಹುದಾಗಿದೆ. ಯುನೈಟೆಡ್ ವೆಸ್ಟ್ರನ್ ಬ್ಯಾಂಕು ಗ್ರಾಹಕರಿಗೆ ಮಾಮೂಲಾಗಿ ನೀಡುತ್ತಿರುವ ಸೇವೆಗಳನ್ನು ಒದಗಿಸಲು ಅಗತ್ಯಕ್ರಮಗಳನ್ನು ಕೈಗೊಂಡ ಬಗ್ಗೆ ಭಾರತೀಯ ಕೈಗಾರಿಕ ಅಭಿವೃದ್ಧಿ ಬ್ಯಾಂಕು ಖಾತ್ರಿ ಪಡಿಸಿಕೊಂಡಿದೆ.

ವಿಲೀನ ಯೋಜನೆಯನ್ವಯ, ಒಂದು ನಿಗದಿತ ದಿನಾಂಕದಂದು, ಯುನೈಟೆಡ್ ವೆಸ್ಟ್ರನ್ ಬ್ಯಾಂಕಿನ ಷೇರುಗಳನ್ನು ಹೊಂದಿರುವವರೆಂದು ದಾಖಲಾದ, ಅಂತಹ ಷೇರುಗಳಲ್ಲಿ ಅವರ ಹಿತಾಸಕ್ತಿಗನುಸಾರ, ಸದಸ್ಯರ ಬೇಡಿಕೆಯನ್ನು ಭಾಗಶಃ ತೃಪ್ತಿಪಡಿಸಲು, ಪೂರ್ತಿ ಪಾವತಿಯಾದ ಪ್ರತಿಯೊಂದು ಷೇರು ಹಣಕ್ಕೆ ಸಂಬಂಧಿಸಿದಂತೆ ಭಾರತೀಯ ಕೈಗಾರಿಕ ಅಭಿವೃದ್ಧಿ ಬ್ಯಾಂಕು ಪ್ರತಿ ಷೇರಿಗೆ 28 ರೂಪಾಯಿ ನಗದು ಹಣವನ್ನು ತಕ್ಷಣವೇ ಪಾವತಿಸುವುದು. ಮುಂದುವರಿದಂತೆ, ಈ ಯೋಜನೆಯನ್ವಯ ಯುನೈಟೆಡ್ ವೆಸ್ಟ್ರನ್ ಬ್ಯಾಂಕಿನ ಆಸ್ತಿಗಳ ಮಾರಾಟದ ಹಣದಿಂದ ಹೊಣೆಗಾರಿಕೆಯನ್ನು ತೀರಿಸಿದನಂತರ ಉಳಿದ ಹೆಚ್ಚುವರಿ ಹಣವನ್ನು ಷೇರುದಾರರು ಅನುಪಾತದನ್ವಯ ನಿರ್ದಿಷ್ಟ ಅವಧಿಯನಂತರ ಪಡೆಯಬಹುದು.

ಜಿ. ರಘುರಾಜ್
ಉಪ ಮಹಾ ವ್ಯವಸ್ಥಾಪಕರು